ಮುಕುತ್ಬನ್ ಗ್ರಾಮ ಹುಲಿಗಳ ಕಾರಣದಿಂದಲೂ ಪ್ರಸಿದ್ಧವಾದುದು. ಅದು, ಹುಲಿಗಳ ತಳಿ ಅಭಿವೃದ್ಧಿ ಕಾರ್ಯಕ್ಕಾಗಿ ಮೀಸಲಾದ ಜಾಗ. ಅಲ್ಲಿದ್ದ ಹಲವು ಹುಲಿಗಳ ಪೈಕಿ ಹೆಣ್ಣುಹುಲಿಯೊಂದು ಗರ್ಭ ಧರಿಸಿತು. ಅವನಿ ಎನ್ನುವುದು ಅವಳ ಹೆಸರು.

ಅವನಿಯ ಪೂರ್ವಜರನ್ನು ಬೆನ್ನಟ್ಟಿ ಹೋದರೆ ಅವರೆಲ್ಲರ ಮೂಲಸ್ಥಾನವೂ ಅದೇ ಮುಕುತ್ಬನ್. ಕಾಲಕೋಶದಲ್ಲಿ ಅವನಿಯ ಪೂರ್ವಜರೆಲ್ಲ ಕಣ್ಮರೆಯಾಗಿ, ಇದೀಗ ಅವನಿಯೊಬ್ಬಳೆ ಆ ವಂಶದ ಪ್ರತಿನಿಧಿಯಾಗಿ ಉಳಿದಿದ್ದಳು. ವನ್ಯ ಪರಿಸರದ ನಡುವೆ ಹಾಯಾಗಿದ್ದ ಅವನಿ ಎರಡು ಮುದ್ದಾದ ಮರಿಗಳಿಗೆ ಅಮ್ಮನಾದಳು.

## ಮಾತೃ ಮಮತೆ - ವ್ಯವಸ್ಥೆಯ ಸ್ವಾರ್ಥ

ಅವನಿ ತಾಯಿಯಾದ ಸಮಯ, ಮುಕುತ್ಬನ್ ಪರಿಸರದಲ್ಲಿ ಸಿಮೆಂಟ್ ಕಾರ್ಖಾನೆ ಅಸ್ತಿತ್ವ ಕಂಡುಕೊಳ್ಳುವ ಸಮಯವೂ ಆಗಿತ್ತು. ಹುಲಿಗಳು ಓಡಾಡುವ ದಾರಿಯಲ್ಲಿ ಜನ ಓಡಾಡತೊಡಗಿದರು. ಮರಿಗಳೊಂದಿಗಿದ್ದ ಅವನಿಗೆ ತನ್ನ ವಾಸಸ್ಥಳದ ಫಾಸಲೆಯಲ್ಲಿ ಮನುಷ್ಯನ ನೆರಳು ಬಿದ್ದುದು ಸಹಜವಾಗಿಯೇ ಕಸಿವಿಸಿ ಉಂಟುಮಾಡಿರಬೇಕು. ತನ್ನ ಸಾಮ್ರಾಜ್ಯವನ್ನು ಅತಿಕ್ರಮಿಗಳಿಂದ ರಕ್ಷಿಸಿಕೊಳ್ಳುವ ಬಹುದೊಡ್ಡ ಸವಾಲನ್ನು ಅವಳು ಎದುರಿಸಬೇಕಾಯಿತು. ಕಾಡಿನೊಳಗೆ ಯಾರೇ ಬಂದರೂ ಅವರನ್ನು ಅಲ್ಲಿಂದ ಓಡಿಸಲು ಅವನಿ ಪ್ರಯತ್ನಿಸುತ್ತಿದ್ದಳು. ಕಾಡಿನಲ್ಲಿ ಮೊಳಗುತ್ತಿದ್ದ ಅವಳ ಭಯಂಕರ ಗರ್ಜನೆಯಲ್ಲಿ ಆತಂಕವೂ ಇತ್ತು, ಅತಿಕ್ರಮಿಗಳಿಗೆ ಎಚ್ಚರಿಕೆಯೂ ಇತ್ತು.

ಹೆಣ್ಣು ಹುಲಿ ಮತ್ತು ಕಾರ್ಪೊರೇಟ್ ಮನುಷ್ಯರ ನಡುವಣ ಸಂಘರ್ಷ ತೀವ್ರಗೊಳ್ಳತೊಡಗಿತು. ಅವನಿಯನ್ನು ಅಲ್ಲಿಂದ ಒಕ್ಕಲೆಬ್ಬಿಸಲು ಕಾಡನ್ನು ಕಡಿಯಲಾಯಿತು. ಬೃಹತ್ ಯಂತ್ರಗಳ ಸಹಾಯದಿಂದ, ಕರ್ಕಶ ಶಬ್ದದಿಂದ ಹುಲಿಯ ಕುಟುಂಬವನ್ನು ಭಯಪಡಿಸಲು ಪ್ರಯತ್ನಿಸಲಾಯಿತು. ಹಸಿ ಬಾಣಂತಿ, ಮರಿಗಳನ್ನು ಕಟ್ಟಿಕೊಂಡು ಎಲ್ಲಿಗೆ ಹೋಗಬೇಕು? ಹುಲಿ–ಮನುಷ್ಯ ಸಂಘರ್ಷದಲ್ಲಿ ಹದಿಮೂರು ಜನ

### ವನ್ಯಮೃಗಗಳಿಗೆ ಬಹುರೂಪಿ ಕಂಟಕ

- ಹುಲಿಯೂ ಸೇರಿದಂತೆ ವನ್ಯಜೀವಿಗಳ ನಾಶಕ್ಕೆ ಕಾಳ್ಗಿಚ್ಚು ಪ್ರಮುಖ ಕಾರಣಗಳಲ್ಲೊಂದಾಗಿದೆ. ಮಾನವ ನಿರ್ಮಿತ ಬೆಂಕಿಯ ಜೊತೆಗೆ, ಜಾಗತಿಕ ತಾಪಮಾನ ಏರಿಕೆ ಕಾಡಿನಲ್ಲಿ ಪದೇಪದೇ ಬೆಂಕಿ ಕಾಣಿಸಿಕೊಳ್ಳಲು ಕಾರಣವಾಗಿದೆ. ‘ಫಾರೆಸ್ಟ್ ಸರ್ವೆ ಆಫ್ ಇಂಡಿಯಾ’ ಪ್ರಕಾರ, 2023ರ ಮೊದಲ ಮೂರು ತಿಂಗಳಲ್ಲಿ ದೇಶದ ವಿವಿಧ ಭಾಗಗಳಲ್ಲಿ ವರದಿಯಾದ ಕಾಡ್ಗಿಚ್ಚಿನ ಪ್ರಕರಣಗಳು 337ಕ್ಕೂ ಹೆಚ್ಚು.
- ಮಾನವ ಸಂಘರ್ಷದಿಂದ ಹಾನಿಗೊಳಗಾಗುವ ಪ್ರಾಣಿಗಳ ಸಂಖ್ಯೆಗಂತೂ ಪಾರವೇ ಇಲ್ಲದಂತಾಗಿದೆ. ಭೂ ಅತಿಕ್ರಮಣ, ಅರಣ್ಯನಾಶ, ಒತ್ತುವರಿ, ಅಭಿವೃದ್ಧಿಗಾಗಿ ಕಾಡುಗಳ ಪರಿವರ್ತನೆಯಂತಹ ಘಟನೆಗಳಲ್ಲಿ ನಾಶವಾದ ಕಾಡುಗಳ ಸಂಖ್ಯೆ ಅಗಣಿತ. ಮಾನವನ ಹಸ್ತಕ್ಷೇಪದಿಂದ ದಟ್ಟ ಅರಣ್ಯಗಳು ಇದೀಗ ಕಿರಿದಾಗುತ್ತಲೇ ಸಾಗುತ್ತಿವೆ.
- ಕಾಡಿನ ನಡುವೆ ನುಸುಳಿರುವ ಬೃಹತ್ ಹೆದ್ದಾರಿಗಳು ವನ್ಯಜೀವಿಗಳ ಸುಗಮ ಸಂಚಾರಕ್ಕೆ ಅಡ್ಡಿಯನ್ನುಂಟು ಮಾಡಿವೆ. ತನ್ನ ಅನುಕೂಲಕ್ಕೆ ತಕ್ಕ ಹಾಗೆ ಪರಿಸರವನ್ನು ಪರಿವರ್ತಿಸಿಕೊಳ್ಳುವ ಧಾವಂತಕ್ಕೆ ಮನುಷ್ಯ ಇಳಿದಿದ್ದಾನೆ.
- ಸ್ಥಳೀಯ ಜನ ಹಾಗೂ ವನ್ಯಜೀವಿಗಳ ನಡುವೆ ಆಗಾಗ ನಡೆಯುವ ಸಂಘರ್ಷದಲ್ಲಿ ಕಾಡು ಪ್ರಾಣಿಗಳು ಅನಾಥವಾಗುತ್ತವೆ.
- ವನ್ಯಜೀವಿ ಸಂರಕ್ಷಣಾ ಕಾಯ್ದೆಗಳನ್ನು ಅತ್ಯಂತ ಹೆಚ್ಚು ಪರಿಣಾಮಕಾರಿಯಾಗಿ ಜಾರಿಗೊಳಿಸುವಲ್ಲಿ ಸರ್ಕಾರದ ಸಂಕಲ್ಪಶಕ್ತಿಯ ಕೊರತೆ ಹಾಗೂ ವ್ಯವಸ್ಥೆಗೆ ಪರಿಸರ ಸಂರಕ್ಷಣೆ ಆದ್ಯತೆಯ ವಿಷಯವಾಗದಿರುವುದು.




ಅವನಿಗೆ ನರಭಕ್ಷಕ ಹಣೆಪಟ್ಟಿ ಕಟ್ಟಿ, ಮರಣ ಶಾಸನ ವಿಧಿಸಿದ ಮಹಾರಾಷ್ಟ್ರ ಸರ್ಕಾರದ ನಿರ್ಧಾರವನ್ನು ವಿರೋಧಿಸಿ ಬೆಂಗಳೂರಿನ ಟೌನ್‌ಹಾಲ್‌ನಲ್ಲಿ ನಡೆದ ಪ್ರತಿಭಟನೆ. ಫೋಟೊ: ಎಸ್.ಕೆ. ದಿನೇಶ್